ಏರಿಯಾ ಯಾವುದು ? ನಾವು ಮೈಸೂರಿಗೆ ಇಂಟಿಗ್ರೇಟ್ ಆದವರೇನು ? ಈ ರೀತಿ ಎರ್ಡಾ ಹೇಳುವಾಗ ನಮ್ಮಂಥವರಿಗೆ ಬಹಳ ನೋವು ಆಗುತ್ತದೆ. ಅದಕ್ಕೇ ನಾವು ಇಂಟಿಗ್ರೇಟ್ ಆಗಿದ್ದು ಎರ್ಡಾ ಸೇರಿ ಕನ್ನಡ ದೇಶ ಆಗುವಂಥಾ ಒಂದು ಪ್ರಾಂತರಚನೆ ಮಾಡಿದರೆ, ಕರ್ನಾಟಕ ಪ್ರಾಂತ ಎಂದು ಹೆಸರು ಇಡಿ ಎಂದು ಹೇಳಿದರೆ, ಮೈಸೂರಿಗೆ ನಾವು ವಿರೋಧ ವಿದ್ದೇವೆ ಎಂದು ಮೈಸೂರುವಾದ ಮಾಡುವವರು ತಿಳಿದು ಕೊಳ್ಳಬಾರದು. ಏಕೆಂದರೆ ಈ ಪ್ರಾಂತ್ಯಕ್ಕೆ ಸೇರಿದಂಥಾ ಕೆಲವು ಭಾಗಗಳವರು ತಮ್ಮ ಆರ್ಥಿಕ, ತಮ್ಮ ರಾಜಕೀಯ ಮತ್ತು ತಮ್ಮ ಆಡಳಿತ ನೀತಿಯನ್ನು ತೆಗೆದುಕೊಂಡರೆ ಅವು ಮೈಸೂರಿನಂತೆಯೇ ಮಾದರಿ ಯಾಗಿದ್ದುವು. ಆದರೂ ಕರ್ನಾಟಕ ರಾಜ್ಯಕ್ಕೆ ಸೇರಿದರೆ ಕನ್ನಡ ಭಾಷೆ ಮಾತನಾಡುವ ರಾಜ್ಯಕ್ಕೆ ಸೇರಿದವರಾಗುತ್ತೇವೆ ಎಂಬ ಧೋರಣೆಯಿಂದ ಸೇರಿದ್ದೇವೆಯೇ ಹೊರತು ಮೈಸೂರಿಗೆ ಸೇರಿದರೆ ನಮಗೆ ಏನೋ ಸಿಕ್ಕುತ್ತದೆ ಎಂಬ ಭಾವನೆಯಿಂದ ಸೇರಿಸಿದೆವೆಂದು ತಪ್ಪು ಅಭಿಪ್ರಾಯವನ್ನು ಇಟ್ಟುಕೊಳ್ಳ ಬಾರದು. ಆ ದೃಷ್ಟಿಯಿಂದ ಇದನ್ನು ನಾವು ಇತ್ಯರ್ಥ ಮಾಡಬೇಕೇ ಹೊರತು ಚರಿತ್ರೆಯ ಹಿನ್ನೆಲೆಯು ಒಂದು ದೃಷ್ಟಿಯನ್ನು ತಾಳಿದ್ದೇ ಆದರೆ ಇದಕ್ಕೆ ನಿಜವಾದಂಥ ಒಂದು ಹೆಸರನ್ನು ಕೊಟ್ಟಂತೆ ಆಗುವುದಿಲ್ಲ ಎಂದು ನನ್ನ ಭಾವನೆ. ಕನ್ನಡ ಭಾಷೆ ಆಡುವಂಥ ಜನರ ಒಂದು ಪ್ರಾಂತರಚನೆ, ಭಾಷಾವಾರು ಪ್ರಾಂತರಚನೆ ಮಾಡ ಬೇಕೆಂಬ ಧೋರಣೆಯನ್ನು ಒಪ್ಪಿ ಈ ಪ್ರಾಂತವನ್ನು ರಚನೆ ಮಾಡಿದ್ದರಿಂದ ಭಾಷೆಗೆ ಹೊಂದಿಕೊಂಡಂಥ ಹೆಸರಿಗೆ ಮನ್ನಣೆ ಕೊಡಬೇಕೇ ಏನಾ ಚರಿತ್ರೆಯ ಹಿನ್ನೆಲೆ ನೋಡಿಕೊಟ್ಟಿದ್ದೇ ಆದರೆ ಯಾವ ಗುರಿಯನ್ನು ಇಟ್ಟುಕೊಂಡಿದ್ದೇವೆಯೋ ಅದನ್ನು ಸಾಧನೆ ಮಾಡಿ ದಂತಾಗುವುದಿಲ್ಲ ಎಂದು ಹೇಳಿ ಇವತ್ತು ಮಂಡಿಸಿರುವ ಈ ನಿರ್ಣಯಕ್ಕೆ ನಾನು ನನ್ನ ಸಮ್ಮತಿಯನ್ನು ಸೂಚಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

---

## Business of the House.

**Mr. SPEAKER.**—I find many members indicating a desire to participate in the debate. I am entirely in the hands of the House. I have already told the House that I have no discretion to extend the period of 3½ hours. At 6 O'Clock I have to put it to the vote because it is not left to me to accommodate all. So, members must help me.

**Sri G. J. MUCKANNAPPA.**—Let the time be extended.

**Sri S. R. KANTHI.**—Under the Rules, you, Sir, have the power to extend the period by one hour.

**Mr. SPEAKER.**—May I pass on a copy of the Rules and request the Hon'ble Minister to point out that relevant rule ? Is the Hon'ble Minister aware that this is not the Business Advisory Committee ?

**Sri S. R. KANTHI.**—I am sorry, Sir. But on the same analogy, you can extend the time by one hour. There is no harm in that.

**Sri S. SIVAPPA** (Sravanabelagola).—Sir, extension of time by one hour will not help because a large number of members want to participate. This is a very important resolution concerning a very vital question of the State. My submission is that time for the discussion of this resolution may be extended by a day or two.

**Mr. SPEAKER.**—I do not know whether the Leader of the Opposition carrys the whole House with him when he says so.

**Sri S. SIVAPPA.**—At least one more day should be given.

**Sri B. D. JATTI.**—Sir, it may not be correct to extend the time by one or two days. If the Hon'ble Members want to take some more time, the time can be extended by two hours.

**Mr. SPEAKER.**—Is it the desire of the House that the time be extended by two hours *i.e.*, we sit till 8 P. M. ?

**Sri S. SIVAPPA.**—If the four days allotted for non-official business is over, this resolution can be carried over to the next non-official day. This is a very vital question and we must have a full-dress debate on it.

**Sri B. D. JATTI.**—Today we can sit up to 8 O'clock. This question was discussed not once, but twice or thrice. There is no point in saying we have not discussed. There was proper and full-dressed discussion about it. So, we can sit up to 8 O'clock and finish it.

**Sri A. S. PATIL** (Nargund).—It may be closed at 7 O'clock.

**Sri S. SIVAPPA.**—You are speaking from your Party's point of view. My party wants one day more. Why do you stand in the way ?

**Sri S. R. KANTHI.**—Let it not be postponed till tomorrow. Let us finish it today.

Mr. SPEAKER.—I would suggest that the Leader of the Opposition and the Leader of the House may go to Lounge and come to some conclusion. That is not a matter to be discussed on the floor of the House. In the meanwhile I will call upon Sri Muckannappa to speak.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾವು ಯಾವ ರಾಜ್ಯದಲ್ಲಿ ಇದ್ದೇವೆಯೋ ಆ ರಾಜ್ಯಕ್ಕೆ ಬೇರೆ ಒಂದು ಹೆಸರನ್ನು ನಾಮಕರಣ ಮಾಡಬೇಕು, ಈಗ ಇರತಕ್ಕ ಹೆಸರು ಚೆನ್ನಾಗಿಲ್ಲ ಎನ್ನುವಂಥಾ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ನನ್ನ ಸ್ನೇಹಿತರು ತಂದಿದ್ದಾರೆ. ಈ ಹೆಸರನ್ನು ಇಡುವಾಗ ತಂದೆ ತಾಯಿಗಳು ಆ ದಿವಸ ಸರಿಯಾಗಿ ನಾಮಕರಣ ಮಾಡಲಿಲ್ಲ. 1956ನೇ ಇಸವಿ ನವಂಬರ್ ತಿಂಗಳು ಒಂದನೇ ತಾರೀಖು ವಿಶಾಲ ಮೈಸೂರೆಂಬ ಕೂಸು ಹುಟ್ಟಿತು. 6 ವರ್ಷಗಳಾದ ಮೇಲೆ ಅದಕ್ಕೆ ನಾಮಕರಣ ಮಾಡಬೇಕು. ಅದಕ್ಕೋಸ್ಕರ ಈ ಶುಭ ಸನ್ನಿವೇಶದಲ್ಲಿ ನೀವೆಲ್ಲರೂ ನಮ್ಮೊಡನೆ ಕೂಡಿ ಒಟ್ಟಾಗಿ ಬನ್ನಿ. ನಮ್ಮ ನಿಮ್ಮ ಅಭಿಪ್ರಾಯ ಒಂದೇ ಆಗಲೀ, ನಾವೆಲ್ಲರೂ ಅಣ್ಣತಮ್ಮಂದಿರು, ಒಂದೇ ಜನ, ಒಂದೇ ಭಾಷೆಯನ್ನು ಮಾತನಾಡತಕ್ಕವರು ಎಂದು ಹೇಳಿಕೊಂಡು ಈಗ ಉದ್ದೇಶವಾಗಿ ಮಾತನಾಡುತ್ತಾ ಕತ್ತಿ ಕಠಾರಿಗಳನ್ನು ಬತ್ತಳಿಕೆಯಿಂದ ತೆಗೆದು ತಮ್ಮ ಮನಸ್ಸಿನಲ್ಲಿರುವುದನ್ನೆಲ್ಲಾ ಈಚೆಗೆ ವಾಂತಿ ಮಾಡಿದರು. ಇದನ್ನು ನೋಡಿದರೆ ನನಗಾದರೂ ಅನಿಸುತ್ತದೆ, ನಾವು ಈ ದೇಶದಲ್ಲಿ ಹುಟ್ಟಿ ಬೆಳೆದೂ ಲಾಯಕ್ಕು ಇಲ್ಲ. ಇವರು ಚೀಟಿ ಕೊಟ್ಟರೆ ಸರ್ಕಾರ ಕೊಟ್ಟ ಹಾಗೆ, ಬೇರೆ ರಾಜ್ಯಕ್ಕೆ ಹೋಗಬೇಕೋ ಏನೋ ಎನ್ನುವ ಭಯ ಬಂದಿದೆ. ಆಡಳಿತ ಪಕ್ಷದಲ್ಲಿರತಕ್ಕ 138 ಜನ ಗಲಾಟೆ ಮಾಡಿದರೂ ಕೂಡ ನಾನು ಜಗ್ಗುವುದಿಲ್ಲ. ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ನೀವು ಇಂಟರಪ್ಟ್ ಮಾಡಿ. ನಾನು ಉತ್ತರ ಕೊಡುತ್ತೇನೆ. ಹಿಂದುಗಡೆ ಸೂತ್ರವನ್ನು ಎಳೆಯುತ್ತೇವೆಂದರೆ, ಅದು ಸಾಧ್ಯವಿಲ್ಲದ ಮಾತು. ನನ್ನ ಸ್ನೇಹಿತರು ಹೇಳಿದರು: ಇದಕ್ಕೆ ಕೊಡಗು ಎಂದು ಏತಕ್ಕೆ ಇಡಬಾರದು ಎಂದು. ಕವಿಗಳಾದ ರನ್ನ, ಪಂಪ ಇವರುಗಳು ಬರೆದಿರತಕ್ಕ ಕರ್ಣಾಟಕದ ಚರಿತ್ರೆಯನ್ನೆಲ್ಲಾ ನಾನು ಓದಿದೆ. ಕಪ್ಪು ಕಸ್ತೂರಿ, ಕನ್ನಡ ಕಸ್ತೂರಿಯಲ್ಲ ಎಂದು ಎಲ್ಲೂ ಹೇಳಲೇ ಇಲ್ಲ. ರಾಷ್ಟ್ರಭಕ್ತರನ್ನು ಯಾರು ಯಾರೋ ಇಲ್ಲದೆ ಇರುವವರನ್ನು ಇಲ್ಲಿಗೆ ಎಳೆದು ಕೊಂಡು ಬಂದು ಹಾಗೆ ಹೇಳಿದರು ಹೀಗೆ ಹೇಳಿದರು ಎಂದು ಹೇಳಿದ್ದಾರೆ. ಅದನ್ನು ಹೇಳುವುದಕ್ಕೆ ಮುಂಚೆ ವಾಸ್ತವಾಂಶಗಳನ್ನು ಪರೀಕ್ಷೆ ಮಾಡಿ ನೋಡಬೇಕು ಎಂದು ನನ್ನ ಸ್ನೇಹಿತರಲ್ಲಿ ನಾನು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾವು ಭಾರತದಲ್ಲಿ ಅಖಂಡ ಕರ್ಣಾಟಕ, ಕನ್ನಡನಾಡ, ಕನ್ನಡವನ್ನು ಮಾತನಾಡುವವರೆಲ್ಲರೂ ಒಂದಾಗಬೇಕು. ನಾವು ಕನ್ನಡದ ಅಡಿಯಲ್ಲಿಯೇ ಬಾಳಿ ಬದುಕಬೇಕು. ಕನ್ನಡದ ಧ್ವಜವನ್ನು ಗೌರೀಶಂಕರ ಶಿಖರದಲ್ಲಿ ಹಾರಿಸಬೇಕು ಎಂದು ಕನ್ನಡದ ಭಾಷೆಯನ್ನು ಉಪಯೋಗಿಸಿ ಕಾವ್ಯ ಮಾಡಿ ಓದಿದರು. ಆದರೆ ಯಾರೂ ಇದಕ್ಕೆ ಕರ್ಣಾಟಕವೆಂದು ಹೆಸರಿಡಬೇಕೆಂದು ಒಂದು ಕೇಸನ್ನು ಮೇಕ್ ಔಟ್ ಮಾಡಿಲ್ಲ. ನೀವು ಬೇಕಾದಷ್ಟು ಎಂದುಕೊಳ್ಳಿ. ವಧು ಚೆನ್ನಾಗಿದೆ. ಆದರೆ ಇದಕ್ಕೆ ತಾರಾಗಣ, ಚಂದ್ರಗಣ ಇದೆಯೋ ಇಲ್ಲವೋ ಗೊತ್ತಿಲ್ಲ. ತಾರಾಬಲ, ಚಂದ್ರಬಲ ಇಲ್ಲದಿದ್ದರೂ ಪರವಾಯಿಲ್ಲ. ಕುಟುಂಬದಲ್ಲಿ ಯಾರಾದರೂ ಪ್ರಾಣ ನೀಗಿದರೂ ಪರವಾಯಿಲ್ಲ. ಮದುವೆ ಆಗಲೇಬೇಕೆಂದು ನನ್ನ ಸ್ನೇಹಿತರಾದ ಶ್ರೀಮಾನ್ ದೊಡ್ಡಮೇಟಿಯವರು ಹೇಳುತ್ತಾರೆ.

Mr. SPEAKER.—Do not mention the names.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವೆಲ್ಲರೂ 6 ವರ್ಷಗಳ ಕಾಲ ಈ ಸಭೆಯಲ್ಲಿ ಚರ್ಚೆ ಮಾಡಿದೆವು. ನಾವು ನೀವೆಲ್ಲಾ ಒಂದಾಗೋಣ. ಎಮೋಷನಲ್ ಇಂಟಿಗ್ರೇಷನ್ ಆಗಬೇಕು. ಆ ಕಡೆ ಅನ್ಯಾಯವಾಗಿದೆ, ಈ ಕಡೆ ಅನ್ಯಾಯವಾಗಿದೆ, ಸೀನಿಯಾರಿಟಿ ಲಿಸ್ಟ್ ಬೇಗ ಇತ್ಯರ್ಥ ಮಾಡಬೇಕು, ಬಿಜಾಪುರ ಡಿಸ್ಟ್ರಿಕ್ಟ್ ಯಾವಾಗಲೂ ಕ್ಷಾಮಕ್ಕೆ ತುತ್ತಾಗುತ್ತಿದೆ, ಅದ್ದರಿಂದ ಘಟಪ್ರಭಾ ಪ್ರಾಜೆಕ್ಟ್ ಕಟ್ಟಬೇಕು, ಮಲಪ್ರಭಾ ಪ್ರಾಜೆಕ್ಟ್ ಕಟ್ಟಬೇಕು, ಆ ಕಡೆ ರಸ್ತೆಗಳಿಲ್ಲ, ಕೆರೆಗಳಿಲ್ಲ, ಸ್ಕೂಲುಗಳಿಲ್ಲ, ಆಸ್ಪತ್ರೆಗಳಿಲ್ಲ. ನಾವು ಬೊಂಬಾಯಿನಲ್ಲಿ ಮಹಾರಾಷ್ಟ್ರದವರ ಕೈಗೆ ಸಿಕ್ಕಿ ನೊಂದಿದ್ದೇವೆ. ಅದಕ್ಕೋಸ್ಕರ ನಾವು ನಿಮ್ಮ ಜೊತೆಯಲ್ಲಿ ಬೆಳೆಯುತ್ತೇವೆ ಎಂದು ಹೇಳಿಬಿಟ್ಟರು. ಆದರೆ ಈ ಮಾನ್ಯ ಸಭೆಯಲ್ಲಿ ನಡೆದಂಥ ನಡವಳಿಕೆಗಳನ್ನೂ ಮತ್ತು ಈ ಸಭೆಯಲ್ಲಿ ಯಾರು ಯಾರು ಕರ್ಣಾಟಕ ಎಂದು ಹೆಸರಿಡಬೇಕೆಂದು ಹೇಳಿದ್ದಾರೆಯೋ ಅವರು ಏನೇನು ಭಾಷಣ ಮಾಡಿದ್ದಾರೆ ಎನ್ನುವುದನ್ನು ನನ್ನ ಸ್ನೇಹಿತರಾದಂಥ ಶ್ರೀಮಾನ್ ಗುರೆಡ್ಡಿಯವರು ಸ್ವಲ್ಪ ಪ್ರೊಸೀಡಿಂಗ್ಸ್ ತೆಗೆದು ನೋಡಿದರೆ ಅವರಿಗೆ ಗೊತ್ತಾಗುತ್ತದೆ. ಇವೊತ್ತಿನ ದಿವಸ ಸರ್ಕಾರದವರು ಮಾಡುತ್ತಾ ಇರತಕ್ಕ ಕೆಲಸಗಳೇನು ಅವರು ತಳೆದಿರತಕ್ಕ ಧೋರಣೆಯೇನು ಎಂಬುದನ್ನು ಸ್ವಲ್ಪ ಯೋಚನೆ ಮಾಡೋಣ. ನಾವು ನೀವು ಒಂದಾಗ ಬೇಕು, ಕರ್ಣಾಟಕ ಎಂದು ಹೆಸರಿಟ್ಟ ಮೇಲೆ ನಮ್ಮ ಮತ್ತು ನಿಮ್ಮ ಬಾಂಧವ್ಯ ಸುಭದ್ರವಾಗುತ್ತದೆ. ಸರಿಯಾದ ಬುನಾದಿಯಲ್ಲಿ ಕರ್ಣಾಟಕ ಕಟ್ಟುತ್ತೇವೆ. ಮೈಸೂರು ಎನ್ನುವ ಹೆಸರು ಇದ್ದರೆ ದೇಶ ಹರಿದು ಹೋಗುತ್ತದೆ. ಮೈಸೂರು ಎನ್ನುವುದು ಒಂದು ಊರಿನ ಹೆಸರು. ಅದನ್ನು ಈ ಅಖಂಡ ಕರ್ಣಾಟಕಕ್ಕೆ ಏತಕ್ಕೆ ಇಡಬೇಕು ಎಂದು ನನ್ನ ಸ್ನೇಹಿತರಾದ ಕೊಡಗಿನ ಶ್ರೀ ಅಪ್ಪಣ್ಣನವರು ಹೇಳಿದರು. ನಾನು ಹೇಳುತ್ತೇನೆ ಮೈಸೂರು ಎಂದು ಇಟ್ಟುಕೊಂಡರೆ ನಿಮಗೆ ಆಗಿರತಕ್ಕ ಅನ್ಯಾಯ ಏನು ಎಂಬುದು ನನಗೆ ಗೊತ್ತಾಗುವುದಿಲ್ಲ. ನಿಮಗೆ ಇಲ್ಲಿ ನ್ಯಾಯ ಇಲ್ಲ ಎಂದೇನಾದರೂ ನಾವು ಹೇಳಿದ್ದೇವೆಯೇ, ನೀವು ಇಲ್ಲರುವುದಕ್ಕೆ ಯೋಗ್ಯರಾದ ಜನ ಅಲ್ಲ ಎಂದೇನಾದರು ಹೇಳಿದ್ದೇವೆಯೇ, ನೀವು ವಿದ್ಯಾವಂತರಲ್ಲ, ಬುದ್ಧಿವಂತರಲ್ಲ ಎಂದೇನಾದರೂ ಟೀಕೆ ಮಾಡಿದ್ದೇವೆಯೇ, ಈ ಮಾನ್ಯ ಸಭೆಯ ಅಧ್ಯಕ್ಷರ ಸ್ಥಾನವನ್ನು ಅಲಂಕರಿಸಿರತಕ್ಕ ಅಧ್ಯಕ್ಷರನ್ನೂ, ಆರೋಗ್ಯ ಮಂತ್ರಿಗಳನ್ನೂ, ಮತ್ತು ಗೃಹ ಸಚಿವರನ್ನೂ ಬಹಳ ಗೌರವದಿಂದ ಕಂಡುಕೊಂಡಿದ್ದೇವೆ.

ಅವರು ದೊಡ್ಡ ರಾಜ್ಯವನ್ನು ಕಟ್ಟಬಲ್ಲರು. ಅದರ ಕೀರ್ತಿಯನ್ನು ಇಮ್ಮಡಿ ಮಾಡಬಲ್ಲರು ಎಂದು ತಿಳಿದುಕೊಂಡಿರುವಾಗ, ಹೆಸರಿಗಾಗಿ ಕಚ್ಚಾಟ ಮಾಡಿ, ವಿಷ ಬೀಜವನ್ನು ಬಿತ್ತಿ, ನೀವು ಬೇರೆ, ನಾವು ಬೇರೆ ಎಂದು ಹೊರಟಿರುವುದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ. ಏಳು ಕೋಟಿಗಿಂತ ಹೆಚ್ಚಿಗೆ ಜನ

ಸಂಖ್ಯೆಯಿರುವ ಉತ್ತರ ಪ್ರದೇಶ ಒಂದು ರಾಜ್ಯವಾಗಿದೆ, ಒಂದು ಕೋಟಿ ಎಪ್ಪತ್ತು ಲಕ್ಷ ಜನ ಸಂಖ್ಯೆಯಿರುವ ಕೇರಳವೂ ಒಂದು ರಾಜ್ಯವಾಗಿದೆ. ಹೀಗಿರುವಾಗ ಎರಡು ಕೋಟಿ ಮೂವತ್ತೈದು ಲಕ್ಷ ಜನರಿರುವ ಮೈಸೂರನ್ನು ಇಬ್ಭಾಗ ಮಾಡಿ, ಅವರು ಹೇಳುತ್ತಿರುವ ಕರಿನಾಡು, ಕನ್ನಡನಾಡು, ಹರಿಹರ ದಿಂದಾಚೆಯಿರುವ ಪ್ರದೇಶವನ್ನು ಆ ಕನ್ನಡನಾಡನ್ನು ಕನ್ನಡಮ್ಮನ ಗುಡಿಯನ್ನು ಪ್ರತ್ಯೇಕ ಒಂದು ರಾಜ್ಯವನ್ನು ಮಾಡಲಿ. ಕೆಂಪುಭೂಮಿ, ಕೆಂಪುನಾಡಿನ ರಾಜ್ಯವಾದ ನಮ್ಮ ಪ್ರದೇಶವನ್ನು ಮೈಸೂರೆಂದು ಕರೆಯಲಿ. ಎರಡು ಕನ್ನಡ ಮಾತನಾಡುವ ರಾಜ್ಯ ಉದಯವಾಗಲಿ. ಆಗ ನಮ್ಮ ಸ್ನೇಹಿತತ್ವ ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ಎಂದು ಹಾಡಲಿ.

**Sri R. M. PATIL** (Minister for Home).—Instead of separating the State into two divisions as Mysore and Karnataka, why should we not call the state by two names?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನನ್ನ ಅಭಿಪ್ರಾಯವೇನೆಂಬುದನ್ನು ನನ್ನ ಬಾಯಿಂದಲೇ ಹೇಳಿದರೆ, ಅದರಂತೆ ಮಾಡಿಸಬೇಕೆಂದು ನನಗಿಂತ ಹಿರಿಯರೂ ಸ್ನೇಹಿತರು ಹೇಳುತ್ತಾರೆ. ನಿಜವಾಗಿಯೂ ಅವರು ಅವರ ಜನರನ್ನು ಒಪ್ಪಿಸಿಕೊಂಡು ಬಂದರೆ, ಒಂದು compromised formula ತೆಗೆದುಕೊಂಡು ಬಂದರೆ, ಆಮೇಲೆ ಅದನ್ನು ನಾವು ಯೋಚನೆ ಮಾಡೋಣ ಎಂದು ನಾನು ಏನಂತಿ ಮಾಡಿಕೊಳ್ಳುತ್ತೇನೆ. ನನ್ನ ಸ್ನೇಹಿತರು ಶ್ರೀ ಆರ್. ಎಸ್. ಪಾಟೀಲ್ ಅವರು ಕವಿಗಳು ಉಪಯೋಗಿಸಿರುವ ಕೆಲವು ಒಳ್ಳೆಯ ಪದಗಳನ್ನು ಜೋಡಿಸಿ ಕವಿಗೆ ಇಂಪಾಗುವಂತೆ ಹೇಳಿದರು. ದೊಡ್ಡಮೇಟಿಯವರು ಹೇಳಿದ ಕನ್ನಡ ಕವಿಗೆ ಇಂಪಾಗಿತ್ತು. ಆದರೆ ಅವರು ಕರ್ನಾಟಕ ಎಂಬ ಹೆಸರು ಹೇಗೆ ಬಂತು ಎಂದು ಹೇಳಲಿಲ್ಲ. ಮೈಸೂರು ಎಂಬ ಹೆಸರು ಮಹಿಷಾಸುರನ ಹೆಸರಿನಿಂದ ಬಂದಿದೆ. ಕರ್ನಾಟಕ ಎಂದು ಹೆಸರನ್ನಿಟ್ಟವರು ಯಾರು, ರಾಜ್ಯಭಾರ ಮಾಡಿದವರು ಯಾರು, ಎಂದು ಹೇಳಲಿಲ್ಲ. ಮಾತನಾಡಿದರೆ, ವಿಜಯನಗರದ ರಾಜರು ಕಟ್ಟಿದರು, ಮೈಸೂರು ಮಹಾರಾಜರಿಗೆ ಕರ್ನಾಟಕ ಸಿಂಹಾಸನಾಧೀಶ್ವರ ಎಂದು ಹಾಕಿಕೊಂಡಿದ್ದರು ಆದುದರಿಂದ ಹೀಗೆ ಮಾಡಿ ಎಂದು ಹೇಳುತ್ತಾರೆ. ಆದರೆ ಈಹೊತ್ತು ಮಹಾರಾಜರೂ ಇಲ್ಲ, ರಾಜರೂ ಇಲ್ಲದ ರಾಜ್ಯದಲ್ಲಿ ನಾವು ಜೀವನ ಮಾಡುತ್ತಿದ್ದೇವೆ. ರಾಜರ ಹೆಸರನ್ನು ಅಳಿಸಿ, ರಾಜ್ಯದಲ್ಲಿದ್ದೇವೆ. ನಾವೂ ಅವರೂ ಕೂಡಿತು ಆರು ವರ್ಷಗಳಾಗಿವೆ. ನಮ್ಮ ಮತ್ತು ಅವರ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕೆ ಕಾಲ ಸಾಲದು. ಆದುದರಿಂದ ಸ್ವಲ್ಪ ಯೋಚನೆ ಮಾಡೋಣ ಎಂದರೆ, ಅದಕ್ಕೊಪ್ಪದೆ ಬಿಲ್ಲು ಬಾಣಗಳನ್ನು ಸರಿಮಾಡಿಕೊಂಡರೆ ಹೇಗೆ? ಆಗಿನ ಮೈಸೂರು ರಾಜಕೀಯ ಮುಖಂಡರು ರಾಜಕೀಯವನ್ನು ಬಿಟ್ಟು ದೂರ ಸರಿದ ಮೇಲೆ, ಈಗ ಈ ವಿಷಯವನ್ನು ತಂದು, ಮೈಸೂರಿನ ಹೆಸರನ್ನು ಬದಲಾಯಿಸಬೇಕೆಂದು ಹೇಳಿದರೆ ಹೇಗೆ? ಅವರು ಮಾಡತಕ್ಕ ಕೃತಿ, ನಡೆಯತಕ್ಕ ನಡೆ ಇವುಗಳಿಂದ ಈ ಹೊತ್ತು ಕರ್ನಾಟಕವೆಂಬ ಹೆಸರನ್ನು ಇಟ್ಟರೆ ನಮ್ಮ ಜನರಲ್ಲಿ ವಿಷಮವೆಂಬ ದ್ವೇಷದಲ್ಲಿ ಒಂದು ದೊಡ್ಡ ಚಳವಳಿಯೇ ನಡೆದೀತು. ಎಲ್ಲಿಯೂ ಕರ್ನಾಟಕ ಆಗಬೇಕು, ಮೈಸೂರಿನ ಹೆಸರನ್ನು ಅಳಿಸಬೇಕೆಂದು ಹೇಳಿಲ್ಲ. ತಂಪಾದ ವಾತಾವರಣದಲ್ಲಿ ಕುಳಿತು ಅವರು ನೋಡಲು, ಪ್ರಾಂತ ಪುನರ್ವಿಂಗಡಣಾ ಸಮಿತಿ, ಮೈಸೂರಿನ ಜನ, ಕನ್ನಡ ಮಾತಾಡುವ ಜನ ಒಂದಾಗಬೇಕೆಂದು ಹೇಳಿದಾಗ, fact finding ಸಮಿತಿ ಮೈಸೂರು ವಿಶಾಲವಾಗಿ ಬಹುದೆಂದು ಹೇಳಿತು. ಆ ಸಂದರ್ಭದಲ್ಲಿ ಶ್ರೀಮಾನ್ ಥೇಬರ್ ಅವರು ನಮ್ಮ ದೇಶದಲ್ಲಿ ಸಂಚಾರ ಮಾಡಿದಾಗ, ತುಮಕೂರಿನಲ್ಲಿ ಒಂದು ಸಭೆಯು ನಡೆದಾಗ ಗಲಾಟೆಯಾಗಿ ಲಾಠಿ ಚಾರ್ಜು ನಡೆದು, ಮಕ್ಕಳೂ ವಿದ್ಯಾರ್ಥಿಗಳೂ ತಲೆ ಕೊಟ್ಟರು; ಮೂರು ಜನರು ಮೃತರಾದರು, ಪ್ರಾಂತ ಪುನರ್ವಿಂಗಡಣೆ ಬೇಡವೆಂದು ವೀರೋಧ ಮಾಡಿ. ಇಷ್ಟೆಲ್ಲ ಆಗಿದ್ದರೂ ಈ ಹೊತ್ತು ತಾವು ಮೆಜಾರಿಟಿ ಇದ್ದುಕೊಂಡು, ಮೈಸೂರೇ ಇರಲೆಂದು ಚಳವಳಿ ನಡೆದರೂ ಅವರನ್ನು ನಿರ್ಲಕ್ಷಿಸಿ, ಬದಲಾವಣೆ ಮಾಡಿದರೆ, ನಾವು ಯಾವ ಭೂಮಿಯಲ್ಲಿ ಅನ್ನವನ್ನು ತಿನ್ನುತ್ತಿದ್ದೇವೋ, ಯಾವ ಭೂಮಿಯಲ್ಲಿ ನಮಗೆ ನಮ್ಮ ತಂದೆ ತಾಯಿಗಳು ರಕ್ಷಣೆ ಕೊಟ್ಟಿದ್ದಾರೋ ಅದರ ಹೆಸರನ್ನು ಳಿಸಲು ನಮ್ಮಲ್ಲಿ ಒಂದು ತೊಟ್ಟು ರಕ್ತ ಇರುವವರೆಗೂ ನಾವು ಹೋರಾಟ ಮಾಡುವುದಕ್ಕೆ ಸಿದ್ಧವಾಗಿದ್ದೇವೆಂದು ಹೇಳುತ್ತಿದ್ದೇನೆ. ಎಸ್. ಆರ್. ಸಿ. ವರದಿಯ ಪ್ರಕಾರ, "ನಿಮ್ಮ ರಾಜ್ಯದಹೆಸರನ್ನು ಳಿಸುತ್ತೇವೆ, ನಿಮಗಿರತಕ್ಕ ಸ್ಥಾನ ಮಾನಗಳನ್ನು ಬದಲಾವಣೆ ಮಾಡುವುದಿಲ್ಲ" ಎಂದು ಭರವಸೆಯನ್ನು ನಮಗೆ ಕೊಟ್ಟು, ಈ ಹೊತ್ತು ಅದನ್ನು ಅಲ್ಲಗಳೆಯುವುದು ಉಚಿತವೇ ಎಂದು ಯೋಚನೆ ಮಾಡಬೇಕು. ಈ ದೇಶ ವಿಶಾಲವಾದುದು ಪ್ರಾಂತ ಪುನರ್ವಿಂಗಡಣೆಯಿಂದ. ಆಗ ಮೈಸೂರು ನಲ್ಸಾಸ್ಥಾನದ ವಿಧಾನಸಭೆ ಈ ವಿಚಾರವನ್ನು ಚರ್ಚೆಮಾಡಿ, ಅದರ ಮೇಲೆ ಮಾಡಿದ ನಿರ್ಣಯವನ್ನು ಶ್ರೀಮಾನ್ ಮಾದಯ್ಯ ಗೌಡರು ಓದಿಹೇಳಿದ್ದಾರೆ. Composite State ಆಗಲೆಂದು ಹೇಳಿದರು. ಕನ್ನಡ ಜನರು ಒಂದಾಗಲಿ, ಈ ರಾಜ್ಯವನ್ನು ಬಿಟ್ಟು ನಾವು ಹೋಗುತ್ತೇವೆ ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಹೇಳುತ್ತಿದ್ದಾರೆ. ಶ್ರೀಮಾನ್ ವೆಂಕಟರಾಮಯ್ಯನವರ ಕ್ಷೇತ್ರದಲ್ಲಿ ಶೇಕಡ 92ರಷ್ಟು ತಮಿಳಿಗರಿದ್ದಾರೆ. ಅವರು ಮೈಸೂರನ್ನು ತೊರೆದು ಹೋಗಬೇಕೆಂದು ಹೇಳುತ್ತಾರೆ; ಕೋಲಾರ ಜಿಲ್ಲೆಯ ನನ್ನ ಸ್ನೇಹಿತರು ನಾವು ಆಂಧ್ರಕ್ಕೆ ಹೋಗಬೇಕೆಂದು ಹೇಳುತ್ತಾರೆ..... ...

**Mr. SPEAKER.**—He did not say that.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಅವರು ನಡೆಸುತ್ತಿರುವ ಕಾರ್ಯಕ್ರಮ, ಹೋಗತಕ್ಕ ದಾರಿ, ಮೈಸೂರಿನ ಜನರನ್ನು ರೊಚ್ಚಿಗೆಬ್ಬಿಸುತ್ತಿವೆ. 'ಈಗ ನಾವೂ ನೀವೂ ಒಂದಾಗಿದ್ದೇವೆ, ಆತುರಪಡಬೇಡಿ, ದೇಶದಲ್ಲಿ ಅನೇಕ ಮುಖ್ಯವಾದ ಸಮಸ್ಯೆಗಳಿವೆ, ಅವುಗಳನ್ನು ಬಗೆ ಹರಿಸೋಣ,' ಎಂದು ಶ್ರೀಮಾನ್ ವೆಂಕಟರಾಮಯ್ಯನವರು ಹೇಳಿದ್ದಾರೆ. ಆತುರದ ನಿರ್ಣಯ ಬೇಡ. Hasty marriage will certainly drive you to divorce. ಆದುದರಿಂದ ವಿನಯದಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀಮಾನ್ ದೇವರಾಜ ಅರಸಿನವರೂ ಇತರ ಸ್ನೇಹಿತರೂ ಎಸ್. ಆರ್. ಸಿ. ವರದಿಯ ಮೇಲೆ ಮಾತಾನಾಡುತ್ತಾ ಹೇಳಿದ್ದಾರೆ. ಹಾಗಿದ್ದರೂ ಅದನ್ನು ನಿರ್ಲಕ್ಷಿಸಿ, ಈ ನಿರ್ಣಯವನ್ನು ಒಪ್ಪಿಕೊಳ್ಳು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವುದಾದರೆ, ಈ ದೇಶ ತುಂಡಾಗಿ ಶಾಂತಿ ಎನ್ನುವುದು ಕನಸಿನ ಮಾತಾಗುತ್ತದೆ.

Official Report of the Eighth Session of the Second Legislative Assembly 1956, 29th March to 26th September 1956, ಇದನ್ನು ನೋಡಿದರೆ, ನನ್ನ ಸ್ನೇಹಿತರುಗಳಾದ ದೇವರಾಜ ಅರಸಿನವರು, ಹುಚ್ಚ ಮಾಸ್ತಿಗೌಡರು, ವೀರಣ್ಣಗೌಡರು, ರಾಚಯ್ಯನವರೂ, ಇನ್ನು ಅನೇಕರು ಹೇಳಿದ್ದಾರೆ.....

ಶ್ರೀ ಬಿ. ರಾಚಯ್ಯ (ಅರಣ್ಯ ಮತು ಮೀನುಗಾರಿಕೆ ಶಾಖೆಗಳ ಮಂತ್ರಿಗಳು).—ನಾನು ಆ ರೀತಿ ಹೇಳಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀ ದೇವರಾಜ ಅರಸಿನವರು ಇನ್ನೂ ಕೆಲವರು ಹೇಳಿದ್ದಾರೆಂದು ಹೇಳಿದೆ. He is a bad lawyer.....

Mr. SPEAKER.—I object to that, I won't call him a bad lawyer.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಷ್ಟು ಹೇಳುತ್ತಾ, ಈ ಮೈಸೂರು ವಿಶಾಲವಾಗಬೇಕೆಂದು ಹೇಳಿದ ಹನುಮಂತಯ್ಯನವರಂಥ ಜನರ ಮಾತಿಗೆ ಬೆಲೆ ಕೊಟ್ಟು, ಒಟ್ಟಾದ ಮೇಲೆ ಭುಜಕ್ಕೆ ಭುಜ ಕೊಟ್ಟು ಕೆಲಸ ಮಾಡಿದರು. ಆರ್ಥಿಕ ಸಮಸ್ಯೆಯನ್ನು ಬಗೆ ಹರಿಸೋಣ, ಇನ್ನೂ ಜಟಿಲವಾದ ಪ್ರಶ್ನೆಗಳಿವೆ, ಅವು ಗಳನ್ನು ಬಗೆಹರಿಸೋಣ ಎನ್ನುವುದನ್ನು ಬಿಟ್ಟು, ಎತ್ತು ಏರಿಗೆಳೆದರೆ, ಕೋಣ ನೀರಿಗೆಳೆಯಿತು ಎನ್ನು ವಂತೆ ಮಾಡಿದೆ. ಅದರಿಂದ ಪರಿಣಾಮವೇನಾಗು ತ್ತದೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇದನ್ನೇಕೆ ಹೇಳ ವುದೆಂದರೆ, ಮಹಾಭಾರತ ಬರೆದ ಕುಮಾರವ್ಯಾಸನ ವಿಚಾರ ತೆಗೆದುಕೊಂಡು ಅದನ್ನು ರಸಭರಿತವಾಗಿ ಬರೆದಿದ್ದಾನೆ, ಕವಿಗೆ ಅವನ ಕವಿತೆ ಬಹಳ ಇಂಪಾಗಿದೆ ಎಂದು ಹೇಳಿ ಏನೋ ಒಂದು ಅರ್ಥ ಕಲ್ಪನೆ ಮಾಡಿದರೆ, ಅದರ ಆಧಾರದ ಮೇಲೆ ಈ ದಿನ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಟ್ಟರೆ ರಾಜ್ಯ ಸುಭದ್ರವಾಗಿರುವುದಕ್ಕೆ ಸಾಧ್ಯವೆ? ಈ ದಿವಸ ಮಾತನಾಡಿದವರು ಒಂದೊಂದು ಹಿಡಿ ವಿಷದ ಬೀಜ ಬಿತ್ತಿದ್ದಾರೆ. ಇವೆಲ್ಲಾ ಮೊಳೆತು, ಬೆಳೆದು ಮರವಾ ದರೆ ನಾವೂ, ನೀವೂ ಈ ದೇಶದಲ್ಲಿ ಬದುಕುವುದಕ್ಕೆ ಸಾಧ್ಯವೇ? ಎಂದು ವಿನಯದಿಂದ ಪ್ರಶ್ನೆ ಹಾಕು ತ್ತೇನೆ. ನಮ್ಮ ಮಿ ತ್ರ ರಾ ದ ಬಹಳ ತಿಳಿವಳಿಕೆ ಯಿರುವ, ಮೂರು ಸಾರಿ ಮಂತ್ರಿಗಳಾಗಿ ರಾಜಕೀ ಯದ ಅನುಭವ ಪಡೆದಿರುವ ಕಡಿದಾಳ್ ಮಂಜಪ್ಪ ನವರು ಭಾವೈಕ್ಯತೆಯಿರಬೇಕು, ಹೊಂದಿಕೊಂಡು ಹೋಗಬೇಕು ಎಂದು ಹೇಳಿದರು. ಇದನ್ನು ನೋಡಿ ದರೆ ಅವರು ಹಾವೇರಿ ನ್ಯಾಯ ಮಾಡುವಂತೆ ಕಾಣು ತ್ತದೆ. ಅವರಿಗೆ ಅಧಿಕಾರದ ಹಂಬಲ ಬಿಡಿ, ಯಾವ ಭೂ ಮಿ ಯ ಲ್ಲಿ ಹುಟ್ಟಿ ಬೆಳೆದಿದ್ದೀರೋ ಅದನ್ನು ಉಳಿಸುವುದಕ್ಕೆ, ಆ ನಾಡಿನ ಹೆಸರನ್ನು ಉಳಿಸುವು ದಕ್ಕೆ ಪ್ರಯತ್ನಮಾಡಿ ಎಂದು ಹೇಳುತ್ತೇನೆ. ಏನಾ ದರೂಮಾಡಿ ಈ ದೇಶವನ್ನು ಇಬ್ಭಾಗ ಮಾಡಬೇಕೆಂಬ ವಿಷಯದಲ್ಲಿ ನಾಂದಿ ಹೊಡುತ್ತಿದ್ದಾರೆ. ಇದುವರೆಗೆ ನಡೆದಿರುವ ವಿದ್ಯಮಾನ ನೋಡಿ ನಮಗೆ ಘಟಪ್ರಭಾ ಬೇಡ, ಮಲಪ್ರಭಾ ಬೇಡ, ಯಾವ ಫ್ಯಾಕ್ಟರಿಯೂ ಬೇಡ, ಮೈಸೂರು 1956ನೆಯ ಇಸವಿಗೆ ಮುಂಚೆ ಫಲವತ್ತಾಗಿ, ಮಾದರಿಯಾಗಿ ಹೇಗಿತ್ತೋ ಹಾಗೆಯೇ ಇದ್ದುಕೊಂಡು ಅದು ತನ್ನ ಹಾದಿಯಲ್ಲೇ ನಡೆದು ಕೊಂಡು ಹೋಗಲಿ, ಅದು ಎಷ್ಟೇ ದೇಗದಲ್ಲಿ ಮುಂದು ವರಿದರೂ ಚಿಂತೆಯಿಲ್ಲ, ನಮ್ಮನ್ನು ಈ ಪಾಶಕ್ಕೆ ಕಟ್ಟಿ ಹಾಕಿ ಯಮನ ಪಟ್ಟಣಕ್ಕೆ ತೆಗದುಕೊಂಡು ಹೋಗಲು ನಾಂದಿ ಹೊಡಬಾರದು, ಪೋಲೀಸ್ ರಾಠಿ ಪೆಟ್ಟು ತರೆಗೆ ಬೀಳಲು ಅವಕಾಶ ಕೊಡದೆ ಕಾಪಾಡಿ, ಪೋಲೀಸರು ಸಿಕ್ಕಾಪಟ್ಟೆ ಹೊಡೆಯುವ ಕೆಲಸಕ್ಕೆ ನಾಂದಿ ಹಾಕುವುದು ಬೇಡ ಎಂದು ವಿನಂತಿ ಮಾಡ ಬೇಕಾಗಿದೆ. ಈ ದಿವಸ ಮಧುರ ಬಾಂಧವ್ಯ ಬೆಳೆಸ ಬೇಕಾದರೆ ಶ್ರೀಮಾ ಕಂಠಿಯವರ ಪುತ್ರಿಯನ್ನು ನನ್ನ ಮಗನಿಗೆ ಕೊಡಲಿ, ಸನ್ನ ಮಗಳನ್ನು ಕಂಠಿಯವರ ಪುತ್ರನಿಗೆ ತೆಗೆದುಕೊಳ್ಳಲಿ.....

[ನಗು]

ಹೋಗಲಿ ಅದನ್ನು ಅಲ್ಲಿಗೇ ಬಿಡುತ್ತೇವೆ. ಹಾಗೆ ಹೇಳಿದ್ದೂ ಭಾವೈಕ್ಯತೆ ಬೆಳೆಯಲಿ ಎಂದು. ನಾವೂ, ನೀವೂ, ಎಲ್ಲರೂ ಒಂದೇ, ಕನ್ನಡನಾಡು ಒಂದೇ, ಜನರೆಲ್ಲಾ ಒಂದೇ ಎಂಬ ಭಾವನೆ ಬರಲು ಹಾಗೆ ಮಾಡಿ ದರೆ ಒಳ್ಳೆಯದು. ಕರ್ನಾಟಕ ಎಂಬ ಹೆಸರಿಡಬೇಕೆಂದು ಒತ್ತಾಯ ಮಾಡುವುದನ್ನು ಬಿಡಬೇಕು ಎಂದು ನಮ್ಮ ಮಿತ್ರರಲ್ಲಿ ವಿನಯದಿಂದ ಪ್ರಾರ್ಥನೆಮಾಡಿ, ಈ ವಿಷ ಯಕ್ಕೆ ಹೆಚ್ಚು ಆಸಕ್ತಿ ಬೇಡ, ಸ್ವಲ್ಪ ಕಾಲ ತಡೆಯಿರಿ, ಇಲ್ಲದಿದ್ದರೆ ಅನಾಹುತವಾಗುತ್ತದೆ, ಆದಕ್ಕಾಗಿ ಶ್ರೀ ಆರ್. ಎಸ್. ಪಾಟೀಲರು ಈ ನಿರ್ಣಯವನ್ನು ವಾಪಸು ಪಡೆಯಲಿ ಎಂದು ಮತ್ತೊಮ್ಮೆ ವಿ ನ ಯ ದಿ ಂ ದ ಪ್ರಾರ್ಥಿಸುತ್ತೇನೆ. ಸಬಕೋ ಸನ್ಮತಿ ದೇಭಗವಾನ್, ರಾಮರಾಮ ಜಯ ರಾಜಾರಾಮ್.

5-30 P.M.

Sri B. D. JATTI.—We have come to an understanding. I consulted the Leader of the Oppsition. Tomorrow is allotted as an official day and we can carry on official business. On Saturday, we have agreed to sit from 3-00 P.M. to 8-C0 P.M. with recess of half-an-hour, if necessary.

Mr. SPEAKER.—May I put it to the House? The normal time allotted for this Resolution will be over by 6 p.m. today. A desire was expressed that it might be extended by a day and on that day we will have no interpellations; the 4½ hours will be devoted to this Resolution.

Sri S. SIVAPPA.—We have agreed to sit on Saturday. Regarding timings, it will be better if we sit in the morning, as we have got some programme.

Sri B. HUTCHE GOWDA (Turuvekere).—Some of us have got some programme.....

Mr. SPEAKER.—All of you have got some programme. Let my friends tell me. How shall I fix the time?

**Sri B. D. JATTI.**—I consulted the Hon'ble Leader of the Opposition.....

**Mr. SPEAKER.**—Many of the Hon'ble Members are interested in taking part in the debate. Taking into consideration the convenience of all, it is better that we should sit from 3 P.M. to 8 P.M. on Saturday. We can all agree to that.

**Sri B. D. JATTI.**—The President has to leave Bangalore and we have to be there. I did not want to mention this. Kindly co-operate with us.

**Sri B. HUTCHE GOWDA.**—Why not we sit tomorrow ?

**Mr. SPEAKER.**—Tomorrow is an official day and I can't declare it as a non-official day. I am trying to accommodate to the maximum extent possible. Why should we differ on such a small point as this ?

**Sri S. SIVAPPA.**—I did not know that some of our people wanted to participate in some function.

**Mr. SPEAKER.**—If he kindly tells me the names of those people who are unable to come at that time, I will accommodate them. There are five hours. I will try to give them opportunity to speak. There is absolutely no commitment.

**Sri S. SIVAPPA.**—What about voting, Sir ?

**Mr. SPEAKER.**—Voting at 8 P.M. on Saturday.

I put it to the House that the time fixed now be extended like this. We will adjourn to day without closing and without putting it to vote. We will again take it up on Saturday from 3 P.M. to 8 P.M. and voting will be at 8 P.M.

**HON'BLE MEMBERS.**—Yes, Sir.

**Mr. SPEAKER.**—Still, we have got some little time left over. The Hon'ble Member Sri Gopala Gowda.

**An HON'BLE MEMBER.**—What time tomorrow ?

**Mr. SPEAKER.**—As usual, at the normal time between 1 P.M. to 6 P.M.

**Sri GANJI VEERAPPA** (Harihar).—Why not in the morning ? Some of us are to go to Mysore?

**Sri B. D. JATTI.**—Why should we change the time now ? We shall meet tomorrow as usual between 1 and 6.

**Mr. SPEAKER.**—Sri Veerappa may bear in mind that morning session is held if it is the last day. Tomorrow is not the last day. Members will have to remain.

**Sri Y. MANJAIAH SHETTY** (Baindur).—The programme distributed to us shows that it will be at 8.30 A.M. tomorrow.

**Mr. SPEAKER.**—We will issue a revised programme. Every Hon'ble Member will kindly note and such of the Hon'ble Members who are not present may be informed.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ಪಾಪಿ, ಈ ಸಭೆಯ ಮುಂದೆ ಶ್ರೀ ಪಾಟೀಲ್‌ರವರು ಮಂಡಿಸಿರುವ ಈ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ. ಮೈಸೂರು ರಾಜ್ಯಕ್ಕೆ ಮೈಸೂರೆಂಬ ಹೆಸರಿಡಬೇಕೇ ಅಥವಾ ಕರ್ನಾಟಕವೆಂದು ಅದನ್ನು ಕರೆಯಬೇಕೇ ಎಂಬ ಪ್ರಶ್ನೆ ಈ ಹೊತ್ತು ನಮ್ಮ ಮುಂದೆ ಬಹಳ ಗಂಭೀರ ರೂಪದಲ್ಲಿ ಬಂದು ನಿಂತಿದೆ. ಈ ಹೆಸರಿನ ಸಮಸ್ಯೆಯನ್ನು ಕರ್ನಾಣಕ ರಾಜ್ಯ ನಿರ್ಮಾಣವಾದಾಗಲೇ ಬಗೆ ಹರಿಸಬಹುದಾಗಿತ್ತು. ಆದರೆ, ಆ ಸನ್ನಿವೇಶದಲ್ಲಿ, ನನ್ನ ಮಿತ್ರರಾದ ಪಾಲಿ ಚನ್ನಪ್ಪನವರು ಹೇಳಿದ ಹಾಗೆ, ಕೇವಲ ಒಂದು ಹೆಸರು, (ಮೈಸೂರೆನ್ನೋಣವೇ, ಕರ್ನಾಟಕವೆನ್ನೋಣವೇ) ಎಂಬ ಸಣ್ಣ ವಿಷಯ. ರಾಜ್ಯ ನಿರ್ಮಾಣವಾಗುವ ಕಾರ್ಯಕ್ಕೆ ಅಡ್ಡಿ ಬರಬಾರದೆಂಬ ಕಾರಣದಿಂದ ಅಂದು ಈ ಸಮಸ್ಯೆಯನ್ನು ನಾವು ಒತ್ತಾಯ ಪೂರ್ವಕವಾಗಿ ತರಲಿಲ್ಲ. ಆದ್ದರಿಂದ ಅಂದು ಈ ಪ್ರಶ್ನೆಯೇ ಇರಲಿಲ್ಲವೆಂದು ಯಾರು ತಿಳಿಯಬಾರದು. ಹೆಸರಿಡುವುದಕ್ಕೆ ಗಂಡ ಹೆಂಡಿರಲ್ಲಿ ಒಮ್ಮತವಿಲ್ಲದೆ ಮಗುವನ್ನು ಕೆರೆಗೆ ಹಾಕಿದರು ಎಂಬಂತೆ ಆಗಬಾರದು ಎಂದು ಭಾವಿಸಿ ಅನೇಕ ಮಾನ್ಯ ಸದಸ್ಯರು ಈ ವಿಷಯವನ್ನು ಬದಿಗಿಟ್ಟರು. ಅಂಥವರಲ್ಲಿ ನಾನೂ ಒಬ್ಬ. ಕರ್ನಾಟಕವಾಗಲೇಬೇಕೆಂದು ತಲೆ ಚಚ್ಚಿಕೊಂಡವರಲ್ಲಿ ನಾನೂ ಒಬ್ಬ. ಹೆಸರಿಗಾಗಿ ಕರ್ನಾಟಕ ರಾಜ್ಯವಾಗುವುದನ್ನು ಬಿಟ್ಟುಬಿಡಬೇಕೆಂಬುದು ಸರಿಯೇ ? ನೀವೇ ಯೋಚನೆ ಮಾಡಿ.

ನುಮ್ಮನೆ ಆದಳಿತಗಾರರನ್ನೂ, ಕಾಂಗ್ರೆಸ್ಸಿನವರನ್ನೂ ಟೀಕಿಸುತ್ತಾರೆ ಎಂದು ಹೇಳುತ್ತಾರೆ; ಆದರೆ ವಾಸ್ತವವಾಗಿ ಆ ಹೊತ್ತು ದೇಶದಲ್ಲಿ ಭಾಷಾವಾರು ರಾಜ್ಯ ರಚನೆಯ ಸಮಸ್ಯೆಯನ್ನು ಬಹಳ ಕೆಟ್ಟ ರೀತಿಯಲ್ಲಿ ಪರಿಹಾರ ಮಾಡುವುದಕ್ಕೆ ಅವಕಾಶಮಾಡಿಕೊಟ್ಟರೆಂದರೆ, ತಪ್ಪಲ್ಲ. ಏಕೆಂದರೆ, ಅನಾವಶ್ಯಕವಾಗಿ ನಾವು ನೋವುಗಳುಂಟಾದುವು ; ರಾಜ್ಯ ರಾಜ್ಯಗಳಲ್ಲಿ ಕಹಿ ವಾತಾವರಣ ಉಂಟಾಯಿತು, ಅನೇಕ ವೇಳೆ ರಾಜ್ಯದಲ್ಲಿ ಉಂಟಾಗಿದ್ದಂಥ ಐಕ್ಯತೆಯು ಒಡೆದು ಹೋಗುವುದಕ್ಕೆ ಕಾರಣವಾಯಿತು. ಇದು ಬ್ರಿಟಿಷರು ನಮ್ಮ ರಾಜಕಾರಣಿಗಳಿಗೆ ಬಿಟ್ಟುಕೊಟ್ಟು ಹೋಗಿರತಕ್ಕ ಕೊಡುಗೆಯೋ ಏನೋ! 'ಒಡೆದು ಆಳು' ಎನ್ನುವ ನೀತಿಯನ್ನು ಕೇಂದ್ರದವರು ಅನುಸರಿಸಿದರು; ಅಂದಿನ ಮೈಸೂರು ರಾಜ್ಯ, ಅಕ್ಕ ಪಕ್ಕದ ರಾಜ್ಯದವರೂ ಅದೇ ನೀತಿಯನ್ನು ಅನುಸರಿಸಿದರು.

ಇದರಿಂದಲೇ ಇಂದೂ ಈ ಸಮಸ್ಯೆ ಜಟಿಲವಾದ ಸಮಸ್ಯೆಯಾಗಿಯೇ ಉಳಿದಿದೆ. ಈಗ ಇದನ್ನು ಹೇಳಿ

(ಶ್ರೀ ಎಸ್. ಗೋಪಾಲಗೌಡ)

ದರೆ ಏನೂ ಪ್ರಯೋಜನವಾಗುವುದಿಲ್ಲವೆಂಬುದೂ ನನಗೆ ಗೊತ್ತಿದೆ: ಈ ಸನ್ನಿವೇಶದಲ್ಲಿ, ನಮ್ಮ ಮಾನ್ಯ ಸ್ನೇಹಿತರಾದ ಮಾದೇಗೌಡರು ಮತ್ತು ಮುಕ್ಕಣ್ಣಪ್ಪ ನವರು ಮಾಡಿದ ಭಾಷಣಗಳನ್ನು ಕೇಳಿ ನನಗೂ ರಕ್ತ ಬಿಸಿ ಆಯಿತು. ಆದರೆ, ನಾವು ವಿಚಾರ ಮಾಡಬೇಕು; ವಿವಾದ ಮಾಡಬೇಕು. ಅಷ್ಟೇ ಹೊರತು, ಈ ಸಮಸ್ಯೆ ಮನುಷ್ಯನನ್ನು ವಿಕಾರಕ್ಕೆ ತೆಗೆದುಕೊಂಡು ಹೋಗುವ ಸಮಸ್ಯೆಯೇ? ವಿಕಾರಗೊಂಡು ರೌದ್ರಕ್ಕೆ ಹೋಗು ವುದು ಅನಾವಶ್ಯಕ...

ಏಕೆಂದರೆ ಹೆಸರಿನಲ್ಲಿ ಏನಿದೆ ಎಂಬ ಪ್ರಶ್ನೆ ಬಹುಶಃ ಬಹಳ ಕಾಲದಿಂದಲೂ ಒಂದು ಜಿಜ್ಞಾಸೆಯಾಗಿಯೇ ಉಳಿದಿದೆ. ಷೇಕ್ಸ್‌ಪಿಯರನೂ ಆ ಬಗೆಗೆ ಹೇಳಿ ದ್ದಾನೆ. ಸಾಹಿತ್ಯದಲ್ಲಿಯೂ ಅನೇಕ ಸಾರಿ ಈ ಪ್ರಶ್ನೆ ಬರುತ್ತದೆ. ನಮ್ಮ ಕಣ್ಣು ಮುಂದೆಯೂ ಅನೇಕಸಾರಿ ಇದು ಎದ್ದು ನಿಲ್ಲುತ್ತದೆ. ಆದರೆ ಹೆಸರಿನಲ್ಲೇ ಎಲ್ಲವೂ ಇದೆಯೆಂದು ಮತ್ತೊಬ್ಬ ಹೇಳುತ್ತಾನೆ. ನಾವು ವಸ್ತುವನ್ನು ನೋಡತಕ್ಕ ದೃಷ್ಟಿಯಲ್ಲಿ ಹೆಸರಿನ ಮಹತ್ವ ಅಡಗಿದೆಯೆಂದು ಆತ ಹೇಳುತ್ತಾನೆ. ಲಘುವಾಗಿ ಭಾವಿಸಿದರೆ ಏನೂ ಇಲ್ಲ. ಇಲ್ಲದಿದ್ದರೆ ಸಮಸ್ತವೂ ಹೆಸರನ್ನವಲಂಬಿಸಿರುತ್ತದೆ. ಏಕೆಂದರೆ ಹೆಸರು ವಸ್ತುವನ್ನು ಸೂಚಿಸತಕ್ಕ ಒಂದು ಶಬ್ದ. ಅದರಲ್ಲಿ ಅರ್ಥ ಅಡಗಿರುತ್ತದೆ; ಬರೀ ರೂಪವಲ್ಲ. ಸಾಧ್ಯವಾದಷ್ಟುಮಟ್ಟಿಗೆ ನಾವು ಹೆಸರನ್ನು ಹೇಳು ವುದರಿಂದಲೇ ಆ ಪದಾರ್ಥವನ್ನು ಅರಿತುಕೊಳ್ಳ ಬಹುದು. ಈ ದೃಷ್ಟಿಯಿಂದ ನಾನು ಯಾವ ಪ್ಯಾಪೋ ಹಕ್ಕೂ ಒಳಗಾಗದೆ. ಈ ವಿಷಯವನ್ನು ಪರಿಶೀಲನೆ ಮಾಡುತ್ತಿದ್ದೇನೆ—ನಾನೂ ಮೈಸೂರು ರಾಜ್ಯದಲ್ಲಿದ್ದ ವನು; ಮೈಸೂರಿಗೆ ಒಂದು ಪರಂಪರೆಯೆಂಬುದೇ ನಾದರೂ ಇದ್ದರೆ, ನನಗೂ ಆ ಪರಂಪರೆ ಕಟ್ಟಿದೆ; ನಾವು ಇಲ್ಲೇ ಬೆಳೆದವರು; ಕಪ್ಪ ಕಾಣಿಕೆಗಳನ್ನು ಯಾರಿಗೋ ಕೊಟ್ಟವರೇ.—ಆದರೂ ಈ ಸಮಸ್ಯೆ ಸ್ವಲ್ಪ ವಿಶಾಲ ಮನಸ್ಸಿನಿಂದ ವಿಚಾರ ಮಾಡಬೇಕು.

ಭಾಷಾವಾರು ರಾಜ್ಯಗಳ ನಿರ್ಮಾಣವಾಗಬೇಕೆಂಬ ಮಾತು ಈಚಿನದಲ್ಲ. ಶ್ರೀಮಾನ್ ಮಾದಪ್ಪ ಗೌಡರು ಹೇಳಿದ ಹಾಗೆ ಕಾಂಗ್ರೆಸ್ಸಿನವರು ಶಿಸ್ತಿಗೊಳಗಾಗಿ ಭಾಷಾವಾರು ಪ್ರಾಂತ್ಯ ರಚನೆಗೆ ಅವಕಾಶ ಮಾಡಿ ಕೊಟ್ಟರು ಎಂಬುದು ನಿಜವಲ್ಲ. ಶಿಸ್ತಿಗಿಂತ ಹೆಚ್ಚಾಗಿ ಚಳವಳಿ ನಡೆದಿದೆ. 1920 ರಿಂದಲೂ ನಡೆಯುತ್ತದೆ. ನಾಗಪುರದಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ಈ ಪ್ರಶ್ನೆ ಬಂದು, ದೇಶಕ್ಕೆ ಒಳ್ಳೆಯದಾಗಬೇಕಾ ದರೆ ಭಾಷಾರವರು ಪ್ರಾಂತ್ಯಗಳ ಆಧಾರದಮೇಲೆಯೇ ಸಾಧ್ಯ, ಈಗಿರುವಂತೆ ಏನು ಮಾಡುವುದಕ್ಕೂ ಸಾಧ್ಯ ವಿಲ್ಲವೆಂದು ಅಂದೇ ಸಾರಿದರು. ಅದಾದಮೇಲೆ ಅನೇಕ ತಿರ್ಮಾನಗಳಾದುವು. ಎಷ್ಟೋ ಕಮಿಷನ್ ಗಳು ನಿರ್ಧಾರವಾದುವು: ಕಮಿಷನ್ ನಿರ್ಧಾರವಾಗು ವುದಕ್ಕೂ ಎಷ್ಟೋ ಪ್ರಯತ್ನಗಳು ನಡೆದವು.

ಶ್ರೀ ಟಿ. ಎಸ್. ಮಾದಪ್ಪಗೌಡ (ನಾಗಮಂಗಲ).—ಕರ್ನಾಟಕ ರಾಜ್ಯ, ಮೈಸೂರು ವಿಶಾಲವಾಗ ಬೇಕು—ಎನ್ನುವ ಕಾಲದಲ್ಲಿಯೂ ಶಾಸನ ಸಭೆಯಲ್ಲಿ ಅದಕ್ಕೆ ಬಹುಮತವಿರಲಿಲ್ಲವೆಂಬುದು ಗೊತ್ತೇ?

ಶ್ರೀ ಎಸ್. ಗೋಪಾಲಗೌಡ.—ಆಗ ಇತ್ತು.

ಶ್ರೀ ಟಿ. ಎನ್. ಮಾದಪ್ಪಗೌಡ.—ಇರಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಇತ್ತು, ಇತ್ತು. ಆಗ ನಾನು ಇದ್ದವನೇ. ಆದರೆ ರಾಜಕಾರಣಿಗಳು 'ಇದು ಬೇಡ' ಎಂದು ತಮ್ಮ ಜಾಗ ತಪ್ಪಿ ಹೋಗು ತ್ತದೆ ಎಂಬ ಭಯ ಹೊಂದಿ ಹೇಳುತ್ತಿದ್ದರು ಅಷ್ಟೇ; ಆದ್ದರಿಂದ ಆಗ ಅದು ಜಾಗದ ಪ್ರಶ್ನೆಯೇ ಹೊರತು ರಾಜ್ಯದ ಪ್ರಶ್ನೆಯಾಗಿರಲಿಲ್ಲ. ಸಾಮಾನ್ಯವಾಗಿ ಈ ಸಂದರ್ಭದಲ್ಲಿ ಆ ಹಿನ್ನೆಲೆಯನ್ನು ನಾವು ಮರೆತು ಬಿಡುತ್ತೇವೆ. ಈ ಸಂದರ್ಭದಲ್ಲಿ ಉದ್ದಾಲಕ ಮಹಾಮುನಿಯ ಕಥೆ ಜ್ಞಾಪಕಕ್ಕೆ ಬರುತ್ತದೆ. ಅವನ ಹೆಂಡತಿ ಚಂಡಿ ಬರೀ ಮೊಂಡಿ. ಏನಾದರೂ ಕೆಲಸ ಹೇಳಿದರೆ ಅದಕ್ಕೆ ವ್ಯತಿರಿಕ್ತವಾಗಿಯೇ ಅವಳು ಮಾಡುತ್ತಿದ್ದಳು. ಈ ಹೊತ್ತು ನನ್ನ ಸ್ನೇಹಿತರು ಬರುತ್ತಾರೆ, ಏನಾದರೂ ಅಡಿಗೆಮಾಡು ಎಂದರೆ ಏನೂ ಮಾಡುವುದಿಲ್ಲ. ಅಡಿಗೆ ಮಾಡಬೇಡ ಎಂದರೆ, ಅಡಿಗೆ ಮಾಡುತ್ತಾಳೆ. ಬಡಿಸು ಎಂದರೆ ಬಡಿಸುವುದಿಲ್ಲ—ಹೀಗಿತ್ತು ಅವಳ ಸ್ವಭಾವ. ಇದನ್ನರಿತು ಆ ಮುನಿ ತನಗೆ ಏನಾದರೂ ಬೇಕೆಂದರೆ ಅದಕ್ಕೆ ವ್ಯತಿರಿಕ್ತವಾಗಿ ಹೇಳಿ ಬುದ್ಧಿವಂತಿಕೆಯಿಂದ ತನ್ನ ಕೆಲಸ ಮಾಡಿಸಿ ಕೊಂಡು ಹೋಗುತ್ತಾ ಒಂದು ಯಜ್ಞವನ್ನು ಕೈಕೊಂಡು ಅದನ್ನು ಮುಗಿಸುವ ಸಮಯಕ್ಕೆ ಬಂದ. ಆಗ ಅವನು, ತನ್ನ ಹೆಂಡತಿಗೆ ಇಷ್ಟು ಹೊತ್ತಿಗೆ ಬುದ್ಧಿ ಬಂದಿರಬಹುದು ಎಂದು ಯೋಚಿಸಿ, ಯಜ್ಞದ ಕೊನೆಯ ದಿನ ಪಿಂಡವನ್ನು ತೆಗೆದುಕೊಂಡು ಯೋಗಿ ಗಂಗಾ ನದಿಗೆ ಹಾಕಿ ಬಾ ಎನ್ನಲಾಗಿ, ಅವಳು ಮೊದಲಿನಂತೆಯೇ ತನ್ನ ಸ್ವಭಾವ ಬಿಡದೆ ಆ ಪಿಂಡ ವನ್ನು ತೆಗೆದುಕೊಂಡು ಹೋಗಿ ಯಾವುದೋ ಹೊಂಡಕ್ಕೆ ಹಾಕಿದಳಂತೆ. ಇದರ ನೀತಿಯೇನು?

ಒಬ್ಬ ಮಾನ್ಯ ಸದಸ್ಯರು.—ಆಗ ಮೈಜಾರಿಟಿ ಇತ್ತೆಂದು ಹೇಳಿದರು. ಹಾಗೆ ಮೆಜಾರಿಟಿ ಇದ್ದಿದ್ದರೆ, ಆಗ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಹನುಮಂತಯ್ಯನವರು ಈ ನಿರ್ಣಯವನ್ನು ಪಾಸು ಮಾಡಿದ ಕೂಡ್ಲೆ ಮನೆಗೇಕೆ ಹೋಗಬೇಕಾಯಿತು? ಅವರ ಮಂತ್ರಿ ಮಂಡಲದಲ್ಲಿದ್ದ ಐದು ಜನರೇನೇ ಅವರನ್ನೇಕೆ depose ಮಾಡಿದರು?

ಶ್ರೀ ಎಸ್. ಗೋಪಾಲಗೌಡ.—ಶ್ರೀಮಾನ್ ಹನು ಮಂತಯ್ಯನವರು ಪದವಿ ಕಳೆದುಕೊಳ್ಳುವುದಕ್ಕೆ ನಾವೂ, ನೀವೂ ಹೊಣೆಯೇ; ಅವರಿಗೆ ಸಹಾಯ ಮಾಡುವುದಕ್ಕೆ ಯಾರಿಗೂ ಸಾಧ್ಯವಿರಲಿಲ್ಲ.

ಆದಿರಲಿ, ನಾನು ಹೇಳಿದಂಥ ಚಂಡಿತನ ನಮಗೆ ಬಹಳ ನಲ ಕೆಡಕು ಮಾಡುತ್ತದೆ. ಯಾರಲ್ಲೇ ಇರಲಿ, ಅದು ಒಳ್ಳೆಯ ಮನೋಭಾವವಲ್ಲ. ಆ ಹೊತ್ತು ನಮ್ಮ ಸ್ನೇಹಿತರು ಇಷ್ಟು ಈ ವಿಷಯದಲ್ಲಿ ಚರ್ಚೆ ಮಾಡುತ್ತಾರೆಂದು ಯಾರೂ ತಿಳಿದುಕೊಂಡಿರಲಿಲ್ಲ. ಇಂದು ಬೆಳಿಗ್ಗೆ ನಾನು ಪತ್ರಿಕೆಯಲ್ಲಿ ನೋಡಿದೆ. ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದ್ದಾರೆ: ಕಾಂಗ್ರೆಸ್ಸಿನವರಿಗೆ ಈ ವಿಷಯದಲ್ಲಿ ಸ್ವತಂತ್ರವಾಗಿ ಓಟು ಮಾಡುವ ಹಕ್ಕೂ ಕೊಟ್ಟಿದ್ದೇವೆ. ಇದೇನೂ ಪಾಲಿಸಿ ವಿಷಯವಲ್ಲ ಎಂದು. ನನಗೆ ಇದನ್ನು ಓದಿ ಬಹಳ ದುಃಖವಾಯಿತು. ಇದು ಪಾಲಿಸಿ ವಿಷಯವಲ್ಲವೆಂದರೆ ಬೇರೆ ಯಾವುದು ಆಗು ತ್ತದೆ? ಹಾಗೆಂದರೆ ಪ್ರತಿಯೊಂದಕ್ಕೂ ಸ್ವಾತಂತ್ರ್ಯ ಕೊಡಬಹುದು. ಅದೂ ಒಂದು ವಿಧದಲ್ಲಿ ದೇಶಕ್ಕೆ ಒಳ್ಳೆಯದೇ ಆಗಬಹುದು. ಮೊನ್ನೆ ಶ್ರೀಮಾನ್ ಹುಚ್ಚೇಗೌಡರು ಒಂದು ನಿರ್ಣಯ ತಂದಿದ್ದರು. ಅದನ್ನು ಸರ್ಕಾರ ಒಪ್ಪಿಕೊಂಡಿದ್ದರೆ ಏನೂ ತೊಂದರೆ ಯಾಗುತ್ತಿರಲಿಲ್ಲ. ಇದರಲ್ಲಿ Policy matter ಎಲ್ಲಿರುತ್ತೆ? ಹೀಗೆ ಪ್ರತಿಯೊಂದನ್ನೂ ಜನ ಚರ್ಚೆ ಮಾಡಿ ತೀರ್ಮಾನ ಮಾಡುವುದಕ್ಕೆ ಅವಕಾಶ ಮಾಡಿ

ಕೊಟ್ಟರೆ ಬಹುಶಃ ರಾಜ್ಯದಲ್ಲಿನ ವಿಧಾನ ಸಭೆ, ಪಾರ್ಲಮೆಂಟು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬಹುದೆಂಬ ಭಾವನೆ ಬರುತ್ತದೆಂದು ಹೇಳಬಲ್ಲೆ. ಆದರೆ ನಾವಿಂದು ಪಾರ್ಟಿ ಪದ್ಧತಿಯನ್ನು ಒಪ್ಪಿಕೊಂಡಿದ್ದೇವೆ. ಬೇರೆ ಹಾದಿಯಲ್ಲಿ ಹೋಗುತ್ತಿದ್ದೇವೆ. ಆ ಹಾದಿಯಲ್ಲಿ ಹೋಗುವಾಗ ಬೇರೆ ಯೋಚನೆಮಾಡಿ ಪ್ರಯೋಜನವಿಲ್ಲ. ಆದರೆ ಈ ವಿಷಯದಲ್ಲಿ ಅವರು ಸೋತಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರು ಇಂತಹ ಸಂದರ್ಭದಲ್ಲಿ ತಮ್ಮ ಪಕ್ಷದ ಸದಸ್ಯರಿಗೆ ಅಭಿಪ್ರಾಯ ಸ್ವಾತಂತ್ರ್ಯ ಕೊಟ್ಟು ಏನು ಚರ್ಚೆ ಮಾಡಬಲ್ಲರು ಎಂಬ ಭಯ ನನಗೆ ಈಗ ಬರುತ್ತಿದೆ. ಅವರು ಮೈಸೂರಿನವರೇ ಆದರೂ ಕರ್ನಾಟಕ ಪ್ರದೇಶದ ಕಾಂಗ್ರೆಸ್ ಕಮಿಟಿಯು ಅಧ್ಯಕ್ಷರಾಗಿ ಸುಮಾರು 10-12 ವರ್ಷಗಳಿದ್ದರು. ಈಗ ಮುಖ್ಯ ಮಂತ್ರಿಗಳು, ರಾಜ್ಯ ಕಾಂಗ್ರೆಸ್ಸಿನ ಅಧ್ಯಕ್ಷರೂ ಈ ಸಭೆಯ ನಾಯಕರೂ ಆಗಿದ್ದಾರೆ. ಮದ್ರಾಸ್, ಬೊಂಬಾಯಿ ಮತ್ತು ಹೈದರಾಬಾದ್ ಪ್ರಾಂತಗಳಲ್ಲಿದ್ದ ಕನ್ನಡಿಗರನ್ನು ವಿಶೇಷವಾಗಿ ಬಲ್ಲವರು. ಕರ್ನಾಟಕಕ್ಕಾಗಿ ಬಹಳವಾಗಿ ಹೋರಾಟ ಮಾಡಿದವರು. ಅಂಥವರು ಈ ಹೆಸರಿನ ವಿಷಯದಲ್ಲಿ ಈ ಧೋರಣೆ ತಳೆದಿರುವುದು ವಿಷಾದಕರ ಮಾತ್ರವಲ್ಲ; ಅವರ ಮುಖಂಡತ್ವದ ಪ್ರಥಮ ಸೋಲು ಎಂದು ಹೇಳದೆ ವಿಧಿಯಿಲ್ಲ. ಶ್ರೀಮಾನ್ ಮಾದಯ್ಯಗೌಡರು ಹೇಳಿದಹಾಗೆ ಹೊರಗಡೆಯವರು ಬಂದರೆ ನಮ್ಮ ರಾಜ್ಯ ಸುಖೀ ರಾಜ್ಯವಾಗುವುದರಲ್ಲಿ ಏನೂ ತೊಂದರೆಯಿಲ್ಲವೆಂದು ಹೇಳಿದ್ದು ನಿಜ. ಆದರೆ ಎಸ್. ಆರ್. ಸಿ. ಕಮಿಷನ್ನಿನವರು ಬಂದಾಗ್ಗೆ ನಮ್ಮ ಹಿರಿಯ ಮಿತ್ರರು ಒಬ್ಬರು ಹೀಗೆ ಹೇಳುತ್ತಿದ್ದರು: "We have no objection to their coming" ಎಂದು. ಅದಕ್ಕೆ ಆಯೋಗದ ಮಾನ್ಯ ಸದಸ್ಯರು ಹೇಳಿದರು, Who are you to object ಎಂದು. ನೀವು ಒಂದು ಕೋಟಿ ಇದ್ದರೆ ಅವರು ಒಂದು ಕೋಟಿ 10 ಲಕ್ಷ ಜನ; ವಿಸ್ತೀರ್ಣದಲ್ಲಿ, ಜನಸಂಖ್ಯೆಯಲ್ಲಿ ನಿಮಗಿಂತಲೂ ಜಾಸ್ತಿ ಇದ್ದಾರೆ. ಅಂದ ಮೇಲೆ Who are you to object ಎಂದು ಹೇಳಿದ್ದರು. ಇದು ಸಣ್ಣ ರಾಜ್ಯವಾಗಿದ್ದರೂ ಯಾವುದೋ ಒಂದು ಸರ್ಕಾರ ಹಿಂದೆ ಇತ್ತು, ಒಂದು ಹೈಕೋರ್ಟ್ ಇತ್ತು, ಒಂದು ಅಡ್ವಾಕೇಟ್ ಜನರಲ್ ಎಂದಿತ್ತು. ಆದುದರಿಂದ ಹೊಸ ರಾಜ್ಯ ನಿರ್ಮಾಣಕ್ಕೆ ಹಳೆಯ ಮೈಸೂರು ಆಧಾರವಾಯಿತು. ಇಲ್ಲವಾದಲ್ಲಿ, ಕರ್ನಾಟಕವೆಂಬ ರಾಜ್ಯವನ್ನು ಹೊಸದಾಗಿ ನಿರ್ಮಾಣ ಮಾಡಬಹುದಾಗಿತ್ತು. ನಂತರ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯವರು ಅಲ್ಲೊಂದು ಬೇರೆ ರಾಜ್ಯ ಮಾಡಬಹುದು ಎಂಬ ವಾದ ಮುಂಡಿಟ್ಟರು. ಎರಡು ರಾಜ್ಯಗಳು ನಿರ್ಮಾಣವಾಗಲೆಂಬ ವಾದ ಹೊಸದೇನೂ ಅಲ್ಲ. ಆದರೆ ಅದರಿಂದ ಯಾವ ರಾಜ್ಯವೂ ಸುಖವಾಗಿ ಬಾಳಿಬದುಕಲು ಸಾಧ್ಯವಿರುತ್ತಿರಲಿಲ್ಲವೆಂಬುದನ್ನು ಈ ಮಾನ್ಯ ಸದಸ್ಯರು ಅರಿಯಬೇಕು. ಜವಾಬ್ದಾರಿಯುತವಾಗಿ ಮಾತನಾಡುವಾಗ ನೀವು ಹೋಗಿ ಬೇರೆ ರಾಜ್ಯ ಮಾಡಿಕೊಳ್ಳಿ ಎಂದು ಯಾರಿಗಾದರೂ ಹೀಗೆ ಅವರಿಗೆ ಹೇಳುವುದಕ್ಕಾಗುತ್ತದೆಯೇ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏಕೆ ?

ಶ್ರೀ ಎಸ್. ಗೋಪಾಲಗೌಡ.—ಏಕೆ ಎಂಬ ಪ್ರಶ್ನೆ ಬೇಡ. ಇದರ ಕಷ್ಟಗಳು ಮತ್ತು ಅದರ ಪರಿಣಾಮ ಏನೆಂಬುದು ನಂತರ ಗೊತ್ತಾಗುತ್ತದೆ.

Sri C. J. MUCKANNAPPA.—When he is questioning my statement, I want to ask, Sir, whether he is making a statement with responsibility.

Mr. SPEAKER.—The hon. Member is not interpreting properly. I will not permit any body to say that his statement is irresponsible.

ಶ್ರೀ ಎಸ್. ಗೋಪಾಲಗೌಡ.—ಅದರಲ್ಲಿಯೂ ಅನೇಕ ದೇಶಗಳಲ್ಲಿ ಕೈಗೆ ಬಂದಂಥ ರಾಜ್ಯಗಳನ್ನು ಕಳೆದುಕೊಂಡಿರತಕ್ಕ ದೃಷ್ಟಾಂತಗಳು ಬೇಕಾದಷ್ಟು ಇವೆ. ಇದಕ್ಕಾಗಿ ಜಗತ್ತಿನಲ್ಲಿ ಪ್ರಸ್ತುತ ಎಷ್ಟೋ ಹೋರಾಟ ನಡೆಯುತ್ತಿದೆ. ರಾಜ್ಯಗಳನ್ನು ಕಳೆದುಕೊಳ್ಳುವುದು ಬಹು ಸುಲಭ. ಆದರೆ ರಾಜ್ಯಗಳನ್ನು ಗಳಿಸುವುದು ಮತ್ತು ಕಟ್ಟುವುದು ಬಹು ಕಷ್ಟ. ಕಳೆದುಕೊಳ್ಳುವುದಕ್ಕೆ ಯಾರು ಬೇಕಾದರೂ ಕಳೆದು ಹಾಕಬಹುದು. ಎಷ್ಟೋ ಜನ ಕಟ್ಟಿದ್ದಂತಹ ರಾಜ್ಯವನ್ನು ಯಾವರೀತಿ ಸುಲಭವಾಗಿ ಕಳೆದಿದ್ದಾರೆಂಬುದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ನನ್ನ ಮಾನ್ಯ ಸ್ನೇಹಿತರು ಅದನ್ನು ಬಹಳ ಜವಾಬ್ದಾರಿಯುತವಾಗಿ ಹೇಳಿದ್ದಾರೆಂದು ನಾನು ಭಾವಿಸಿದ್ದೇನೆ. ಇಂತಹ ವಿಶಾಲ ಮತ್ತು ತೊಡಕಿನ ಪ್ರಶ್ನೆ ಚರ್ಚೆ ಬಂದಾಗ್ಗೆ ಸರ್ಕಾರದವರು ಬಹಳ ಸೂಕ್ಷ್ಮವಾಗಿ ವಿಚಾರ ಮಾಡಬೇಕಾಗಿದೆ. ಯಾವ ಮಾತಿನಿಂದ ಹೆಚ್ಚು ವಿಷ ಉಂಟಾಗುತ್ತದೆ ಎಂಬುದನ್ನು ನಿರ್ಮಮತೆಯಿಂದ ನೋಡಿದರೆ ಶ್ರೀಮಾನ್ ಮುಕ್ಕಣ್ಣಪ್ಪನವರ ಸಲಹೆ ಬಹಳ ವಿಷ ಬೀಜಗಳನ್ನು ಬಿತ್ತತಕ್ಕ ಸಲಹೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಆದರೆ ಆ ಮಾನ್ಯ ಸದಸ್ಯರಿಗೆ ಅವರ ಅಭಿಪ್ರಾಯವನ್ನು ಆ ರೀತಿಯಾಗಿ ಟ್ಟುಕೊಳ್ಳುವುದಕ್ಕೆ ಹಕ್ಕು ಇದೆ. ಈ ಸಂದರ್ಭದಲ್ಲಿ ನಾನು ವಿನಯದಿಂದ ತಮ್ಮೆಲ್ಲರನ್ನು ಪ್ರಾರ್ಥನೆ ಮಾಡುವುದು ಇಷ್ಟೆ. ಈ ರಾಜ್ಯಕ್ಕೆ ಕರ್ನಾಟಕವೆಂಬ ಹೆಸರು ಆಗುವುದಕ್ಕೆ ಬಹಳ ಕಾರಣಗಳಿವೆ. ಆದರೆ ಮೈಸೂರಿನ ಪರಂಪರೆಯಲ್ಲಿ ಇದು ಒಂದು ರಾಜ್ಯವಾಗಿರಲಿಲ್ಲವೆಂದು ಯಾರೇ ಹೇಳಿರಲಿ ಅದು ಒಂದು ಬೇರೆ ಮಾತು. ಮುಖ್ಯವಾಗಿ 2 ಸೇರು ಆಳತೆಯುಳ್ಳಂಥ ಪಾತ್ರೆಯಲ್ಲಿ 10 ಸೇರು ದ್ರವವನ್ನು ಸುರಿಯುವುದಕ್ಕಾಗುವುದಿಲ್ಲ. ಅದಕ್ಕೆ ಒಂದು ಮಿತಿ ಇರುತ್ತದೆ. ಹೆಸರೇನೋ ವಿಸ್ತರಿಸಿಕೊಳ್ಳಬಹುದು. ಸಣ್ಣ ಮಗುವನ್ನು ದೊಡ್ಡದಾಗಿ ಬೆಳೆಸಬಹುದು. ಆದರೆ ಅದು ಯಾವರೀತಿ ಬೆಳೆಯುತ್ತದೆ, ಮತ್ತು ಯಾವರೀತಿ ಬೆಳೆದಿದೆ ಎಂಬುದನ್ನು ಆಲೋಚನೆ ಮಾಡಬೇಕು. ಮೈಸೂರಿಗೇನೋ ಒಳ್ಳೆಯ ಹೆಸರು ಇದೆ ಎಂಬುದನ್ನು ನಾನು ಒಪ್ಪುತ್ತೇನೆ. ದೆಹಲಿಯಲ್ಲಿ ಹೋದರೆ ನಮ್ಮನ್ನು ಕಪ್ಪಾಗಿರುವವರನ್ನು ಮದ್ರಾಸಿ ಎಂದು ಹೇಳುತ್ತಾರೆ. ನಾವು ಮೈಸೂರಿನವರು ಎಂದಾಗ ಮದ್ರಾಸಿನವರಿಗಿಂತ ಸ್ವಲ್ಪ ವಾಸಿ ಎಂದು ಕೊಳ್ಳುತ್ತಾರೆ. ಬೊಂಬಾಯಿನಲ್ಲಿ ಹೋದರೆ ಮೈಸೂರಿನವರಿಗೆ ಬಾಡಿಗೆಗೆ ಸೈಕಲ್ ತೆಗೆದುಕೊಂಡು ಹೋಗಲು ಅಂಗಡಿಯವರು ಸಹಾಯ ಮಾಡುತ್ತಾರೆ. ಮೈಸೂರಿಗೆ ಹೆಸರಾದ ಗಂಧದ, ಕಾಫಿಯ, ಮತ್ತೆ ಕೆಲವು ಸಾಂಬಾರದ ದಿನಸಿಗಳನ್ನು ನೋಡುತ್ತೇವೆ. ಇದರಲ್ಲೆ ಮೈಸೂರು ಜಗದ್ವಿಖ್ಯಾತವಾಗಿದೆ. ಅದರ ಜೊತೆಗೆ ರಾಜಾ, ಜರೀಪೇಟ, ನವಿಲುಗರಿ ಮುಂತಾದ್ದೂ ಇವೆ. ಆ ತರಹವಾಗಿ ಮೈಸೂರು

(ಶ್ರೀ ಎಸ್. ಗೋಪಾಲಗೌಡ)

ಎಂದರೆ ರಾಜವಂಶಸ್ಥರೇ ಇರಬೇಕು ಎಂದಾಗುತ್ತದೆ. ಈಗ ಅನೇಕ ಸಣ್ಣ ರಾಜ್ಯಗಳು ಇರುತ್ತವೆ. ಕೆಲವು ಸಲ ಇತಿಹಾಸಗಳಿಂದ ಬಹಳ ಸಹಾಯವಾಗುತ್ತದೆ. ಮತ್ತೆ ಕೆಲವು ಸಲ ಚರಿತ್ರೆ ಅವಕ್ಕೆ ವಿರೋಧವಾಗಿ ಹೋಗಿ ದೊಡ್ಡ ದೊಡ್ಡ ಸಾಮ್ರಾಜ್ಯಗಳೇ ಮುಳುಗಿ ಹೋಗತಕ್ಕ ಪ್ರಸಂಗಗಳನ್ನು ನಾವೀಗ ಕಣ್ಣಾರೆಯಿಂದ ನೋಡುತ್ತಿದ್ದೇವೆ. ಸಾಹಿತ್ಯ ದೃಷ್ಟಿಯಿಂದ, ಕನ್ನಡ ನಾಡಿನ ಭವಿಷ್ಯತ್ತಿನ ದೃಷ್ಟಿಯಿಂದ ಹಾಗೂ ಈ ನಾಡಿನ ಭಾಷೆಯ ದೃಷ್ಟಿಯಿಂದ ಕರ್ನಾಟಕ ವೆಂಬುದಾಗಿ ಹೆಸರು ಇಡುವುದು ಒಳ್ಳೆಯದಾಗಿದೆ. ಅದು ಇವತ್ತು ಅಂತರ್ಗತವಾಗಿ ಹರಿಯತಕ್ಕ ಗಂಗೆಯಾಗಿರಬಹುದು. ಅದಕ್ಕೇನೋ ಇನ್ನೂ ಕಾಲ ಬಾರದೆ ಇರಬಹುದು. ಅದಕ್ಕೂ ಒಳ್ಳೆಯ ಕಾಲವಿದೆ. ಕೇರಳದವರು ಏನೋ ಮಾಡಿ ತೋರಿಸಿದರು. ಅಲ್ಲಿ ಕಮ್ಯೂನಿಸ್ಟ್ ರಾಜ್ಯವೂ ಬಂತು. ದೊಡ್ಡ ಗಲಾಟೆಯೂ ಆಯಿತು. ಏನಾಗುತ್ತದೋ ಏನೋ ಎಂಬ ಭಯವನ್ನು ವ್ಯಕ್ತಪಡಿಸಿ ತೋರಿಸಿದರು. ಆದರೆ ಕರ್ನಾಟಕದವರೂ ಸಹ ಮಾಡಿ ತೋರಿಸುವ ಪವಾಡಗಳು ಇವೆ. ಕನ್ನಡ ನಾಡು ಬೆಳೆಯುತ್ತದೆ. ಚರ್ಚೆಯೇಕೆ ಹಿಂದಕ್ಕೆ ಹೋಗದೆ ಮುಂದೆಯೇ ಹೋಗುತ್ತದೆ? ಆದ್ದರಿಂದ ಈ ರಾಜ್ಯವನ್ನು ಸ್ಥಾಪನೆಮಾಡುವಾಗ ಇಂಥಾದ್ದನ್ನೆಲ್ಲಾ ನರಿಮಾಡುವುದಕ್ಕೆ ಚಳುವಳಿಕಾರರು ಯೋಚನೆ ಮಾಡಿದ್ದಾರೆ. ಆ ಕಾಲದಲ್ಲಿ ಅನೇಕ ದೊಡ್ಡ ದೊಡ್ಡ ಕವಿಗಳು ಈ ಬಗ್ಗೆ ವಿಶೇಷವಾಗಿ ವರ್ಣಿಸಿದ್ದಾರೆ. ಗುಜರಾತ, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರ—ಹೀಗೆ ಪ್ರತಿನಾಡಿಗೂ ಆಯಾದೇಶದ ಭಾಷೆಯನ್ನು ಸೂಚಿಸುವುದು ಹೆಸರು ಆಗಿದೆ. ಆದರೆ ಕರ್ನಾಟಕಕ್ಕೆ ಅದನ್ನು ಅನ್ವಯಿಸಬಾರದು ಎನ್ನುವುದು ಸಮಂಜಸವಲ್ಲ. ಮೈಸೂರಿನಲ್ಲಿ ಇಂತಹ ಪ್ರಶ್ನೆಯನ್ನು ಹಾಕಿದಾಗ ಅದು ಅಷ್ಟು ಬುದ್ಧಿವಂತಿಕೆಯಾದ ಪ್ರಶ್ನೆಯಲ್ಲವೆಂದು ನಾನು ಹೇಳಬೇಕಾಗಿದೆ. ಮೈಸೂರಿನ ಹಿನ್ನೆಲೆ ನೋಡಿದಾಗ ರಾಜ್ಯಗಳ ಪುನರ್ವಿಂಗಡಣೆಯ ಕಾಲದಲ್ಲಿ ಎಸ್.ಆರ್.ಸಿ. ಯವರೂ ಮೈಸೂರು ರಾಜ್ಯವೆಂದು ಎಲ್ಲಿಯೂ ಒಪ್ಪಿಕೊಂಡಿಲ್ಲ. ಆ ಕಾಲಕ್ಕೆ ಬರೀ ಬಾಯಿಮಾತಿನಲ್ಲಿ ಹೇಳಲಾಗಿತ್ತು. ವರದಿಯಲ್ಲಿ ಮೈಸೂರು ಸಂಸ್ಥಾನವೆಂದು ಇಲ್ಲವೇ ಇಲ್ಲ. ರಾಜ್ಯ ಬರುವುದು ಹೋಗುತ್ತಲ್ಲಾ ಎಂದು ಆಗ ಒಪ್ಪಲಾಗಿತ್ತು. ಸಾಮಾನ್ಯವಾಗಿ ಹೊಸ ರಾಜ್ಯ ಕಟ್ಟುವಾಗ ಹಳೆಯ ಕೆಲವು ಒಪ್ಪಂದಗಳನ್ನು ಮುರಿಯುವುದರಿಂದ ಅದರಿಂದೇನೂ ಬಾಧಕವಿಲ್ಲ. ಎಸ್.ಆರ್.ಸಿ. ಕಮಿಷನ್ ವರದಿಯಲ್ಲಿ ಈ ಬಗ್ಗೆ ಗಲಾಟೆ ಬಂದಾಗ ಶ್ರೀ ಡೇಬರ್ ಅವರು ಮತ್ತು ಕೆಲವರು ಯಾರಿಗೋ ಏನೋ ಆಶ್ವಾಸನೆ ಕೊಟ್ಟಿದ್ದರಂತೆ. ನಾವು ನಮ್ಮನೆ ಈಗ ಈ ಬಗ್ಗೆ ಗೊಂದಲ ಮಾಡಿಕೊಂಡಹಾಗಾಗಿದೆ.

6-00 P.M.

ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದರು, ಹಿಂದೆ ಆದ ಒಪ್ಪಂದವನ್ನು ಈಗ ಮುರಿಯುವುದಕ್ಕೆ ಆಗುತ್ತದೆಯೇ ಎಂದು. ಎಷ್ಟೋ ಒಪ್ಪಂದಗಳನ್ನು ಮುರಿಯಬೇಕಾಗುತ್ತದೆ. ನಾಳೆ ಮುರಿಯುವವರಿದ್ದಾರೆ. ಆ ಒಪ್ಪಂದವನ್ನು ಮಾಡಿಕೊಂಡವರು ಯಾರು ಎನ್ನುವ ಪ್ರಶ್ನೆ ಬರುತ್ತದೆ. ಕರ್ನಾಟಕದ ಪರವಾಗಿ ಆಗ ಏನೋ ಒಂದು ಒಪ್ಪಂದವನ್ನು ಮಾಡಿಕೊಂಡರು. ಮುಂದೆ ಬರತಕ್ಕ ಸರ್ಕಾರ ಅದನ್ನು ಪರಿಪಾಲನೆ ಮಾಡುತ್ತದೆ ಎನ್ನುವುದಕ್ಕೆ ಯಾವ ಗ್ಯಾರಂಟಿ ಕೊಡುವುದಕ್ಕೆ ಸಾಧ್ಯ? ಹಿಂದೆ ಸೂಯಸ್ ಕಾಲುವೆಯ ವಿಷಯ ಬಂದಾಗ ಹಿಂದೆ ಆದ ಒಪ್ಪಂದವನ್ನು ಮುರಿಯಬೇಕಾಗಿ ಬಂತು. ಯಾರೋ ಯಾವುದೋ ಕಾಲದಲ್ಲಿ ಯಾರಿಗೋ ಒಪ್ಪಂದ ಮಾಡಿಕೊಟ್ಟಿದ್ದರೆ ಮುಂದೆ ಬರುವವರು ಅದನ್ನು ಹಾಗೇ ಒಪ್ಪಿಕೊಳ್ಳುತ್ತಾರೆ ಎಂದು ಯಾವ ಗ್ಯಾರಂಟಿಯನ್ನೂ ಕೊಡುವುದಕ್ಕೆ ಆಗುವುದಿಲ್ಲ. ಅಂತರ ರಾಷ್ಟ್ರೀಯ ಸಂಸ್ಥೆಗಳು ಭರವಸೆಯನ್ನು ಕೊಡುವುದಕ್ಕಾಗುವುದಿಲ್ಲ, ಅಂಥ ಒಪ್ಪಂದಗಳನ್ನು ರಕ್ಷಣೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಆವೊತ್ತ ಆ ಸನ್ನಿವೇಶವನ್ನು ದಾಟಿಕೊಳ್ಳುವುದಕ್ಕೆ ಏನೋ ಒಂದು ರಾಜಿ ಮಾಡಿಕೊಳ್ಳಲು ಹಾವೇರಿ ನ್ಯಾಯಮಾಡಿ ಒಂದು ರಾಜಿಯನ್ನು ಮಾಡಿಕೊಂಡು ಆ ಸನ್ನಿವೇಶವನ್ನು ದಾಟಿಕೊಂಡರು. ಅದು ಒಂದು ಬುದ್ಧಿವಂತಿಕೆ ಎಂದು ಹೇಳಬಹುದು. ಇದರ ಬಗ್ಗೆ ಸಾಕಷ್ಟು ಜಿಜ್ಞಾಸೆ ನಡೆದಿದೆ. ಇದರ ಬಗ್ಗೆ ಸಾಕಷ್ಟು ತೀವ್ರವಾದ ಭಾವೋದ್ರೇಕ ಉಂಟಾಗಿದೆ. ವತ್ತ ಇದನ್ನು ಭಾವನೋದ್ರೇಕಕ್ಕೆ ತೆಗೆದುಕೊಂಡು ಹೋಗುವುದು ಬೇಡ ಎಂದು ನಾನು ನನ್ನ ಸ್ನೇಹಿತರಾದ ಮುಕ್ಕಣ್ಣಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಗೋಪಾಲ ಗೌಡರು ತಮ್ಮ ಚರ್ಚೆಯನ್ನು ಮುಂದಿನ ಶನಿವಾರ ಮುಂದುವರಿಸಬಹುದು.

The House will now adjourn and meet tomorrow at 1 P.M.

---

*The House adjourned at Five Minutes past Six of the Clock to meet again at One of the Clock on Friday, the 3rd August 1962.*